**ದಿನಾಂಕ: 21-10-2010ರಂದು ಪೂರ್ವಾಹ್ನ: 11-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷತೆ: ಶ್ರೀ ಎಸ್.ದ್ಯಾವೇಗೌಡ**

**ಅಧ್ಯಕ್ಷರು,**

**ಸಾಮಾನ್ಯ ಸ್ಥಾಯಿ ಸಮಿತಿ**

**ಹಾಜರಿ:07** **ಗೈರು ಹಾಜರಿ:00**

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪಕಾರ್ಯದರ್ಶಿ(ಆಡಳಿತ) ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಸ್ತ್ರೀ ಶಕ್ತಿ ಯೋಜನೆಯಡಿ ಅರಸೀಕೆರೆ ತಾಲ್ಲೂಕು ಸ್ತ್ರೀ ಶಕ್ತಿ ಭವನ ನಿರ್ಮಿಸಲು ನಿವೇಶನ ಹಸ್ತಾಂತರಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಡಿ.ಆರ್.ಡಿ.ಎ/ಸಿ.ಆರ್ 61/2010-11 ದಿನಾಂಕ: 18-08-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಅರಸೀಕೆರೆ ತಾಲ್ಲೂಕಿನಲ್ಲಿ ಸ್ತ್ರೀ ಶಕ್ತಿ ಭವನ ನಿರ್ಮಾಣಕ್ಕಾಗಿ ಅಗತ್ಯವಿದ್ದ ನಿವೇಶನವನ್ನು ತಾಲ್ಲೂಕು ಪಂಚಾಯಿತಿಗೆ ಸೇರಿದ ಜಾಗದಲ್ಲಿ 40 X 70 ನಿವೇಶನ ನೀಡಲು ದಿ: 02-02-2010 ರಂದು ನಡೆದ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದು, ಸದರಿ ನಿರ್ಣಯಕ್ಕೆ ಅನುಮೋದನೆ ನೀಡುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಕೋರಿರುವಂತೆ ಅರಸೀಕೆರೆ ತಾಲ್ಲೂಕು ಪಂಚಾಯಿತಿಗೆ ಸೇರಿದ ಜಾಗದಲ್ಲಿ 40 X 70 ನಿವೇಶನವನ್ನು ಅರಸೀಕೆರೆ ತಾಲ್ಲೂಕಿನಲ್ಲಿ ಸ್ತ್ರೀ ಶಕ್ತಿ ಭವನ ನಿರ್ಮಾಣಕ್ಕಾಗಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | | |
|---|---|---|---|
| 2 | ಚನ್ನರಾಯಪಟ್ಟಣ ತಾಲ್ಲೂಕು ಪಂಚಾಯಿತಿಗೆ ಸೇರುವ ಶ್ರವಣಬೆಳಗೊಳ ಪಟ್ಟಣದಲ್ಲಿ ಹಳೆ ಕಟ್ಟಡವು ಶಿಥಿಲವಾಗಿರುವುದರಿಂದ, ಈ ಕಟ್ಟಡವನ್ನು ನೆಲಸಮಗೊಳಿಸಿ, ಸದರಿ ಸ್ಥಳದಲ್ಲಿ ಸಮುದಾಯ ಭವನ ನಿರ್ಮಿಸಲು ಸಭೆಯ ನಿರ್ಣಯಕ್ಕೆ ಮಂಡಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಡಿ.ಆರ್.ಡಿ.ಎ/ಸಿಆರ್-72/2010-11 ದಿನಾಂಕ: 11-10-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚನ್ನರಾಯಪಟ್ಟಣ ಇವರು ತಮ್ಮ ಪತ್ರದಲ್ಲಿ ತಾಲ್ಲೂಕು ಪಂಚಾಯಿತಿಗೆ ಸೇರಿದ ಮುಸಾಫೀರ್ ಖಾನ್ ಜಾಗವು ಶ್ರವಣಬೆಳಗೊಳ ಪಟ್ಟಣದ ಮಧ್ಯ ಭಾಗದಲ್ಲಿದ್ದು, ಸದರಿ ಸ್ಥಳದಲ್ಲಿ 3 ಕಟ್ಟಡಗಳಿದ್ದು, ಸುಮಾರು 50 ರಿಂದ 60 ವರ್ಷಗಳ ಹಳೆ ಕಟ್ಟಡವಾಗಿದ್ದು, ಶಿಥಿಲಗೊಂಡಿರುವುದರಿಂದ, ಯಾವುದೇ ಆದಾಯ ತಾಲ್ಲೂಕು ಪಂಚಾಯಿತಿಗೆ ಬರುತ್ತಿಲ್ಲವಾದ್ದರಿಂದ, ಸದರಿ ಕಟ್ಟಡಗಳನ್ನು ನೆಲಸಮಗೊಳಿಸಿ, ಈ ಸ್ಥಳದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಸಮುದಾಯಭವನ ನಿರ್ಮಿಸುವ ಬಗ್ಗೆ ದಿನಾಂಕ: 10-09-2008ರಂದು ಜರುಗಿರುವ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯವಾಗಿರುತ್ತದೆ. ಆದ್ದರಿಂದ, ಶಿಥಿಲವಾದ ಕಟ್ಟಡಗಳನ್ನು ನೆಲಸಮಗೊಳಿಸಲು ಅನುಮತಿ ನೀಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚನ್ನರಾಯಪಟ್ಟಣ ಇವರು ಕೋರಿರುವಂತೆ ಶ್ರವಣ ಬೆಳಗೊಳ ಪಟ್ಟಣದ ಮಧ್ಯಭಾಗದಲ್ಲಿ ತಾಲ್ಲೂಕು ಪಂಚಾಯಿತಿಗೆ ಸೇರಿದ ಮುಸಾಫೀರ್ ಖಾನ್ ಜಾಗದಲ್ಲಿ ಶಿಥಿಲಾವಸ್ಥೆಯಲ್ಲಿರುವ 3 ಕಟ್ಟಡಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಚನ್ನರಾಯಪಟ್ಟಣ ಇವರಿಂದ ತಾಂತ್ರಿಕ ಅನುಮೋದನೆಯನ್ನು ಪಡೆದು ನೆಲಸಮಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 3 | ತಾಲ್ಲೂಕು ಪಂಚಾಯಿತಿಯ ಹಿಂಭಾಗದಲ್ಲಿರುವ ಗೋಡೌನ್ ಮತ್ತು ಮರಗಳನ್ನು ಕಡಿವಲು ಅನುಮತಿ ಕೋರಿ | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬೇಲೂರು ತಾಲ್ಲೂಕು ಇವರು ತಮ್ಮ ಪತ್ರದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜೀವ್ ಗಾಂಧಿ ಭಾರತ್ ನಿರ್ಮಾಣ ಸೇವಾ ಕೇಂದ್ರದ ಕಟ್ಟಡ ಕಟ್ಟಲು ತಾಲ್ಲೂಕು ಪಂಚಾಯಿತಿಯ ಹಿಂಬಾಗದಲ್ಲಿರುವ ಗೋಡೌನ್ ಮತ್ತು ಮರಗಳನ್ನು ಕಡವಲು ದಿನಾಂಕ: 15-09-2010ರಂದು ನಡೆದ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಇದಕ್ಕೆ ಅನುಮತಿ ನೀಡಬೇಕೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬೇಲೂರು ಇವರು ಕೋರಿರುವಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜೀವ್ ಗಾಂಧಿ ಭಾರತ್ ನಿರ್ಮಾಣ ಸೇವಾ ಕೇಂದ್ರದ ಕಟ್ಟಡ ಕಟ್ಟಲು ತಾಲ್ಲೂಕು ಪಂಚಾಯಿತಿ ಹಿಂಬಾಗದಲ್ಲಿರುವ ಗೋಡೌನ್ ಮತ್ತು ಮರಗಳನ್ನು ಕಡವಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು ಮತ್ತು ದೊರೆತ ಸಾಮಗ್ರಿಗಳ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 4 | ಸಕಲೇಶಪುರ ತಾಲ್ಲೂಕು ಹುರುಡಿ ಗ್ರಾಮದ ಬಿಸಿಎಂ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ ಇವರು ಸಕಲೇಶಪುರ ತಾಲ್ಲೂಕು ಹುರುಡಿ ಗ್ರಾಮದ ಬಿಸಿಎಂ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು 2007-08ನೇ ಸಾಲಿನಿಂದ ಪ್ರಾರಂಭಿಸಿ | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಹಾಸನ ಇವರು ಕೋರಿರು ವಂತೆ ಸಕಲೇಶಪುರ |

| | | | |
|---|---|---|---|
| | ಬಾಡಿಗೆಯನ್ನು ಪುನರ್ ನಿಗದಿ ಪಡಿಸುವ ಬಗ್ಗೆ. | ಶ್ರೀ ಕೆ.ಎಸ್. ಕುಮಾರಸ್ವಾಮಿ ಬಿನ್ ಲೇಟ್ ಕೆ.ಆರ್. ಸಣ್ಣಪ್ಪಗೌಡ ಇವರ ಮಾಲೀಕತ್ವದಲ್ಲಿರುವ ಕಟ್ಟಡವನ್ನು ದಿನಾಂಕ: 01-02-2008ರಿಂದ ಬಾಡಿಗೆಗೆ ಪಡೆದು ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದ್ದು, ಸದರಿ ಕಟ್ಟಡಕ್ಕೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಜಿಪಂಹಾ/ ಆ.ಸಿ(8)172/2008-09 ದಿನಾಂಕ: 1-12-2008ರಿಂದ ಅನ್ವಯಿಸುವಂತೆ ತಲಾ ಮಾಹೆಯಾನ ರೂ.7100.00 ಬಾಡಿಗೆ ನಿಗದಿ ಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಕಟ್ಟಡದಲ್ಲಿ ಹೆಚ್ಚುವರಿಯಾಗಿ ಕೊಠಡಿ ನಿರ್ಮಾಣ ಹಾಗೂ ಎರಡು ಶೌಚಾಲಯಗಳನ್ನು ನಿರ್ಮಾಣ ಮಾಡಿರುವುದರಿಂದ, ಕಟ್ಟಡದ ಬಾಡಿಗೆಯನ್ನು ರೂ.7100.00 ರಿಂದ ರೂ.11500.00ಕ್ಕೆ ಪುನರ್ ನಿಗದಿಪಡಿಸಿಕೊಡುವಂತೆ ಸೂಕ್ತ ಕ್ರಮ ವಹಿಸಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಸಕಲೇಶಪುರ ಇವರು ವರದಿ ಸಲ್ಲಿಸಿರುತ್ತಾರೆ. ಅದರಂತೆ, ಸದರಿ ಕಟ್ಟಡಕ್ಕೆ ಬಾಡಿಗೆ ಪುನರ್ ನಿಗದಿ ಪಡಿಸುವ ಸಲುವಾಗಿ ಸಭೆಯ ನಿರ್ಣಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ತಾಲ್ಲೂಕು ಹುರುಡಿ ಗ್ರಾಮದ ಬಿಸಿಎಂ ಇಲಾಖಾ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿರುವ ಶ್ರೀ ಕೆ.ಎಸ್. ಕುಮಾರಸ್ವಾಮಿ ಬಿನ್ ಲೇಟ್ ಕೆ.ಆರ್. ಸಣ್ಣಪ್ಪಗೌಡ ಇವರ ಮಾಲೀಕತ್ವದಲ್ಲಿರುವ ಕಟ್ಟಡಕ್ಕೆ ದಿನಾಂಕ: 01-11-2010 ರಿಂದ ಅನ್ವಯ ವಾಗುವಂತೆ ಮಾಹೆಯಾನ ರೂ.11500.00 (ರೂಪಾಯಿ ಹನ್ನೊಂದು ಸಾವಿರದ ಐದುನೂರು ಮಾತ್ರ) ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 5 | ಹಾಸನ ನಗರದಲ್ಲಿ ನಂ.1 ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಕಟ್ಟಡ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿ ಅನುದಾನ ಮಂಜೂರು ಮಾಡುವ ಬಗ್ಗೆ. | ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ತಮ್ಮ ಪತ್ರದಲ್ಲಿ ಹಾಸನ ನಗರದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯು 2009-10ನೇ ಸಾಲಿನಲ್ಲಿ ರೂ.20.00ಲಕ್ಷಗಳಿಗೆ ಮಂಜೂರಾಗಿದ್ದು, ಟೆಂಡರಿನಲ್ಲಿ ಕಾಮಗಾರಿ ರೂ.18.00ಲಕ್ಷಗಳಿಗೆ ಮಿತಿಯಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಇಲ್ಲಿಯವರೆಗೆ ರೂ.6.00ಲಕ್ಷಗಳನ್ನು ಮಾತ್ರ ಪಾವತಿಸಲಾಗಿದ್ದು, ಇನ್ನೂ ರೂ.12.00ಲಕ್ಷಗಳನ್ನು ಪಾವತಿಸ ಬೇಕಾಗಿರುತ್ತದೆ. ಅಲ್ಲದೆ, ವಿಭಾಗೀಯ ಕಛೇರಿಯ ಕಟ್ಟಡದ ಭಾಗಗಳನ್ನು ರಸ್ತೆಯ ಅಗಲೀಕರಣಕ್ಕಾಗಿ ನೆಲಸಮ ಮಾಡುವ ಯೋಜನೆಯು ನಗರಸಭೆಯಲ್ಲಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಛೇರಿ ಕಟ್ಟಡವನ್ನು ಸಹ ಇಲ್ಲಿಯೇ ನಿರ್ಮಿಸಬೇಕಾಗಿರುವುದರಿಂದ, ರೂ.24.50ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡಲು ಹಾಗೂ ಹಿಂದಿನ ಬಾಕಿ | ಸಭೆಯಲ್ಲಿ ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಕೋರಿರುವಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಕಛೇರಿ ಕಟ್ಟಡಕ್ಕೆ ಪಾವತಿಸಬೇಕಾಗಿರುವ ಬಾಕಿ ಅನುದಾನ ರೂ.12.00 ಲಕ್ಷ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಛೇರಿ ಕಟ್ಟಡದ ನಿರ್ಮಾಣಕ್ಕೆ ರೂ.24.50ಲಕ್ಷ ಹಾಗೂ ಸದರಿ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಸೇರಿ ರೂ.36.50ಲಕ್ಷ (ರೂಪಾಯಿ ಮೂವತ್ತಾರು ಲಕ್ಷದ ಐವತ್ತು ಸಾವಿರ ಮಾತ್ರ)ಗಳನ್ನು ಬಿಡುಗಡೆ ಮಾಡಿ ಕಟ್ಟಡವನ್ನು ಪೂರ್ಣಗೊಳಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | | |
|---|---|---|---|
| | | ಸೇರಿ ಒಟ್ಟು ರೂ.36.50ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | |
| 6 | ಅರಕಲಗೂಡು ಟೌನ್ ನಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕೆ ಮಾಹೆಯಾನ ಬಾಡಿಗೆಯನ್ನು ನಿಗದಿ ಪಡಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)146/2010-11 ದಿನಾಂಕ: 21-10-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2007-08ನೇ ಸಾಲಿನಲ್ಲಿ ಮಂಜೂರಾಗಿ ಪ್ರಾರಂಭಿಸಲಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು 42000 ಚದರ ಅಡಿ ವಿಸ್ತೀರ್ಣವುಳ್ಳ ಮತ್ತು ಎಲ್ಲಾ ಸೌಕರ್ಯ ಹೊಂದಿರುವ ಶ್ರೀ ಜಯದೇವ ಸ್ವಾಮಿಗಳು, ಚಿಲುಮೆಮಠ, ಅರಕಲಗೂಡು ಇವರ ಒಡೆತನದಲ್ಲಿರುವ ಕಟ್ಟಡದಲ್ಲಿ ದಿನಾಂಕ: 01-11-2009ರಿಂದ ನಡೆಸಲಾಗುತ್ತಿದೆ. ಕಟ್ಟಡದ ಮಾಲೀಕರು ಸರ್ಕಾರ ನಿಗದಿಪಡಿಸಿದ ಬಾಡಿಗೆಯನ್ನು ಪಡೆಯಲು ಒಪ್ಪಿರುತ್ತಾರೆ. ಕಟ್ಟಡಕ್ಕೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ಇವರು ಮಾಹೆಯಾನ ರೂ.42500/-ಗಳನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಆದಕಾರಣ, ಕಟ್ಟಡದ ಮಾಲೀಕರಿಗೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ ಅರಕಲಗೂಡು ಟೌನ್ ನಲ್ಲಿ ಶ್ರೀ ಜಯದೇವ ಸ್ವಾಮಿಗಳು, ಚಿಲುಮೆಮಠ, ಅರಕಲಗೂಡು ಇವರ ಒಡೆತನ ದಲ್ಲಿರುವ ಕಟ್ಟಡದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡಕ್ಕೆ ಮಾಹೆಯಾನ ರೂ.42500/-(ರೂಪಾಯಿ ನಲವತ್ತೆರಡು ಸಾವಿರದ ಐದು ನೂರು ಮಾತ್ರ) ಗಳಂತೆ ದಿನಾಂಕ: 01-11-2009ರಿಂದ ಬಾಡಿಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7 | ಅರಕಲಗೂಡಿನಲ್ಲಿರುವ ಹಳೇ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ವಸತಿ ನಿಲಯ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ನಡೆಸಲು ಅನುಕೂಲ ವಾಗುವಂತೆ ದುರಸ್ಥಿ ಪಡಿಸುವ ಬಗ್ಗೆ. | ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಲೋಕನಾಥ್ ರವರು ಮನವಿಯನ್ನು ಸಲ್ಲಿಸಿ ಅರಕಲಗೂಡಿನಲ್ಲಿ ಬಿ.ಸಿ.ಎಂ ಇಲಾಖೆಯ ಪ್ರಿ ಮೆಟ್ರಿಕ್ ವಸತಿ ನಿಲಯ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಸತಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುತ್ತವೆ. ಆದರೆ, ಹಳೇ ತಾಲ್ಲೂಕು ಕಛೇರಿ ಕಟ್ಟಡವು ಹಾಲಿ ಖಾಲಿಯಿದ್ದು, ಸದರಿ ಕಟ್ಟಡವನ್ನು ದುರಸ್ಥಿಪಡಿಸಿಕೊಂಡು ವಸತಿನಿಲಯಗಳಾಗಿ ಬಳಸಿಕೊಂಡಲ್ಲಿ ಸರ್ಕಾರಕ್ಕೆ ಹಣವು ಸಹ ಉಳಿತಾಯವಾಗುವುದು. ಆದ್ದರಿಂದ, ಹಳೇ ತಾಲ್ಲೂಕು ಕಛೇರಿ ಕಟ್ಟಡವನ್ನು ವಸತಿ ನಿಲಯಕ್ಕೆ ಬಳಸಲು ಮುಂದಿನ ಕ್ರಮ ಕೈಗೊಳ್ಳಲು ಸೂಚನೆ ನೀಡಬೇಕೆಂದು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅರಕಲಗೂಡಿನಲ್ಲಿರುವ ಹಳೇ ತಾಲ್ಲೂಕು ಕಛೇರಿ ಕಟ್ಟಡದ ದುರಸ್ಥಿಗಾಗಿ ಹಿಂದುಳಿದ ವರ್ಗಗಳ ಇಲಾಖೆಯಡಿ ಕಟ್ಟಡ ದುರಸ್ಥಿಗಾಗಿ ನಿಗದಿಪಡಿಸುವ ಅನುದಾನದಲ್ಲಿ ಅವಶ್ಯ ಹಣವನ್ನು ಒದಗಿಸಿ ಕಟ್ಟಡವನ್ನು ದುರಸ್ಥಿಪಡಿಸಿ ವಿದ್ಯಾರ್ಥಿನಿಲಯ ಅಥವಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ನಡೆಸಲು ಕ್ರಮ ವಹಿಸಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರಿಗೆ ತಿಳಿಸಲು ಸಭೆಯು ಸರ್ವಾನುಮತ ದಿಂದ ತೀರ್ಮಾನಿಸಿತು. |

| | | | |
|---|---|---|---|
| 8 | 2009-10ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕು ಹಾನುಬಾಳು ಗ್ರಾಮ ಪಂಚಾಯಿತಿ ಅಗನಿಗುಡ್ಡದಿಂದ ನೈಸರ್ಗಿಕ ಜಲಧಾರೆ ಕುಡಿಯುವ ನೀರು ಸರಬರಾಜು ಯೋಜನೆಗೆ ಅನುದಾನ ಬಿಡುಗಡೆ ಬಗ್ಗೆ. | ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ತಮ್ಮ ಪತ್ರದಲ್ಲಿ ಸಕಲೇಶಪುರ ತಾಲ್ಲೂಕು ಹಾನುಬಾಳ್ಳು ಗ್ರಾಮ ಪಂಚಾಯಿತಿ, ಅಗನಿಗುಡ್ಡದಿಂದ ನೈಸರ್ಗಿಕ ಜಲಧಾರೆ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.39.00ಲಕ್ಷಗಳಿಗೆ ಮಂಜೂರಾಗಿದ್ದು, ಟೆಂಡರ್ ಪ್ರಕಟಣೆ ಸಂಖ್ಯೆ: 01/2010-11ರಲ್ಲಿ ಕಾಮಗಾರಿಯನ್ನು ಕಾರ್ಯಾದೇಶ ಸಂಖ್ಯೆ: 07/2010-11ರಲ್ಲಿ ವಹಿಸಲಾಗಿದ್ದು, ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಭಾಗಶ: ಬಿಲ್ಲು ಸಲ್ಲಿಸಿರುತ್ತಾರೆ. ಅಲ್ಲದೆ, ಈ ಕಾಮಗಾರಿಯು 2010-11ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಾಗಿ ಅನುಮೋದನೆಯಾಗಿರುತ್ತದೆ. ಈ ಕಾಮಗಾರಿಯು ಐ.ಎಂ.ಐ.ಎಸ್ ಯೋಜನೆಯಡಿ ಸೇರದೇ ಇರುವುದರಿಂದ, ಸರ್ಕಾರಿ ಆದೇಶ ದಿನಾಂಕ: 09-03-2010ರನ್ವಯ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಡುಗಡೆಗೊಳಿಸಿದ ಕುಡಿಯುವ ನೀರು ಯೋಜನೆಯಡಿ ಪಾವತಿಸಲು ಅನುಮೋದನೆ ನೀಡಬೇಕಾಗಿ ಹಾಗೂ ಸ್ಥಾಯಿ ಸಮಿತಿ ಅನುಮೋದನೆ ದೊರಕಿಸಿಕೊಡಬೇಕಾಗಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಕೋರಿರುವಂತೆ ಸಕಲೇಶಪುರ ತಾಲ್ಲೂಕು ಹಾನುಬಾಳು ಗ್ರಾಮ ಪಂಚಾಯಿತಿ, ಅಗನಿಗುಡ್ಡದಿಂದ ನೈಸರ್ಗಿಕ ಜಲಧಾರೆ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗೆ ಹಣ ಪಾವತಿಸಲು ಜಿಲ್ಲಾ ಪಂಚಾಯಿತಿಯಲ್ಲಿ ಯಾವುದೇ ಅನುದಾನ ಲಭ್ಯವಿರುವುದಿಲ್ಲ. ಕಾಮಗಾರಿಯು ತುಂಬಾ ಅವಶ್ಯಕವಾಗಿರುವುದರಿಂದ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಉತ್ತಮ ಯೋಜನೆಯಾಗಿರು ವುದರಿಂದ, ಈ ಯೋಜನೆಯನ್ನು ಐ.ಎಂ.ಐ.ಎಸ್ ನಲ್ಲಿ ದಾಖಲು ಮಾಡಲು ಅನುಮತಿಯನ್ನು ನೀಡಬೇಕೆಂದು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | | |
| 1 | 2010-11ನೇ ಸಾಲಿಗೆ 4702 ಅಂತರ್ಜಲ ಅಭಿವೃದ್ಧಿ ಯೋಜನೆ ಯಡಿ ರೂ.1.50ಕೋಟಿಗಳಿಗೆ ಕ್ರಿಯಾ ಯೋಜನೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ | ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಸಿ.ಎನ್.ಬಾಲಕೃಷ್ಣರವರು ಮಾತನಾಡುತ್ತಾ, 2010-11ನೇ ಸಾಲಿಗೆ ಜಿಲ್ಲಾ ಪಂಚಾಯಿತಿ ವತಿಯಿಂದ 4702 ಅಂತರ್ಜಲ ಅಭಿವೃದ್ಧಿ ಯೋಜನೆಯಡಿ ರೂ.150.00ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಇದಕ್ಕೆ ಸಮಿತಿಯ ಎಲ್ಲಾ ಸದಸ್ಯರುಗಳು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರಾಗಿ ಚರ್ಚಿಸಲಾಯಿತು.<br>2010-11ನೇ ಸಾಲಿಗೆ 4702 ಅಂತರ್ಜಲ ಅಭಿವೃದ್ಧಿ ಯೋಜನೆಯಡಿ ರೂ.150.00ಲಕ್ಷ( ರೂಪಾಯಿ ನೂರೈವತ್ತು ಲಕ್ಷ ಮಾತ್ರ) ಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸಭೆಯು ಸರ್ವಾನು ಮತದಿಂದ ತೀರ್ಮಾನಿಸಿತು ಹಾಗೂ ಸರ್ಕಾರದ ಅನುಮೋದನೆ ದೊರೆಯುವವರೆಗೆ ಯಾವುದೆ ಕ್ರಮ ಕೈಗೊಳ್ಳದಿರಲು ಸಭೆ ನಿರ್ಧರಿಸಿತು. |

| | | | |
|---|---|---|---|
| 2 | 20-25 ವರ್ಷಗಳಿಗಿಂತ ಹಿಂದೆ ನಿರ್ಮಿಸಿರುವ ಓವರ್ ಟ್ಯಾಂಕ್ ಗಳನ್ನು ಕೆಡವಿ ಹೊಸದಾಗಿ ನಿರ್ಮಿಸಲು ಐ.ಎಂ.ಐ.ಎಸ್ ನಲ್ಲಿ ದಾಖಲು ಮಾಡಲು ಅನುಮತಿ ನೀಡಿ ಅವಶ್ಯ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ. | ಜಿಲ್ಲೆಯಲ್ಲಿ 20-25 ವರ್ಷಗಳಿಗಿಂತ ಹಿಂದೆ ನಿರ್ಮಿಸಲಾದ ಓವರ್ ಟ್ಯಾಂಕ್ ಗಳು ತುಂಬಾ ಶಿಥಿಲಾವಸ್ಥೆಯಲ್ಲಿದ್ದು, ಯಾವುದೇ ಉಪಯೋಗವಿರುವುದಿಲ್ಲ. ಅಂತಹ ಓವರ್ ಟ್ಯಾಂಕ್ ಗಳನ್ನು ಕೆಡವಿ ಹೊಸ ಟ್ಯಾಂಕ್ ಗಳನ್ನು ನಿರ್ಮಿಸುವುದು ಅವಶ್ಯಕತೆಯಿರುತ್ತದೆ. ಆದ್ದರಿಂದ, ಶಿಥಿಲಾವಸ್ಥೆಯಲ್ಲಿರುವ ಓವರ್ ಟ್ಯಾಂಕ್ ಗಳ ಪಟ್ಟಿಯನ್ನು ಮಾಡಿ ಐ.ಎಂ.ಐ.ಎಸ್ ನಲ್ಲಿ ದಾಖಲು ಮಾಡಲು ಅನುಮತಿ ನೀಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅವಶ್ಯ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸಮಿತಿ ಸದಸ್ಯರು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲೆಯಲ್ಲಿ 20-25 ವರ್ಷಗಳಿಗಿಂತ ಹಿಂದೆ ನಿರ್ಮಿಸಿ ತುಂಬಾ ಶಿಥಿಲಾವಸ್ಥೆಯಲ್ಲಿರುವ ಓವರ್ ಟ್ಯಾಂಕ್ ಗಳ ಪಟ್ಟಿಯನ್ನು ಮಾಡಿ ಐ.ಎಂ.ಐ.ಎಸ್ ನಲ್ಲಿ ದಾಖಲು ಮಾಡಲು ಅನುಮತಿ ನೀಡುವಂತೆ ಮತ್ತು ಕಾಮಗಾರಿಗಳ ಅನುಷ್ಠಾನಕ್ಕಾಗಿ ಅವಶ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 3 | ರಸ್ತೆ ನಿರ್ಮಾಣಕ್ಕೆ ಜಾಗ ನೀಡುವ ಕುರಿತು. | ಶ್ರೀಮತಿ ನಂಜಮ್ಮ ಉ: ಕಮಲಮ್ಮ, ಮಾನ್ಯ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿರವರು ಮನವಿಯನ್ನು ಸಲ್ಲಿಸಿ, ಆಲೂರಿನಲ್ಲಿರುವ ಸರ್ಕಾರಿ ಪದವಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಕಾಲೇಜಿಗೆ ಹೋಗಲು ಆಲೂರು ರಸ್ತೆಯಿಂದ ಮಾರ್ಗವಿಲ್ಲದೇ ತುಂಬಾ ತೊಂದರೆಯಾಗಿರುತ್ತದೆ. ಆದ್ದರಿಂದ, ಕಾಲೇಜಿಗೆ ಹೋಗಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯ ಹಾಗೂ ತೋಟಗಾರಿಕೆ ಇಲಾಖೆಯ ಕಛೇರಿಯ ನಡುವೆ ಆಲೂರು ರಸ್ತೆ ಮೂಲಕ ರಸ್ತೆಯನ್ನು ನಿರ್ಮಾಣ ಮಾಡಲು ಸೂಕ್ತ ಜಾಗವನ್ನು ಸಂಬಂಧಿಸಿದ ಇಲಾಖೆಯವರುಗಳಿಂದ ಬಿಡಿಸಿಕೊಡಬೇಕಾಗಿ ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷರು ಕೋರಿರುವಂತೆ ಆಲೂರಿನಲ್ಲಿರುವ ಸರ್ಕಾರಿ ಪದವಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಕಾಲೇಜಿಗೆ ಹೋಗಲು ಅನುಕೂಲವಾಗುವಂತೆ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯ ಹಾಗೂ ತೋಟಗಾರಿಕೆ ಇಲಾಖೆಯ ಕಛೇರಿ ನಡುವೆ ರಸ್ತೆಯನ್ನು ನಿರ್ಮಾಣ ಮಾಡುವ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಆಲೂರು ಇವರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಲು ಮತ್ತು ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಉಪ ವಿಭಾಗಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಎಸ್.ದ್ಯಾವೇಗೌಡ)
ಅಧ್ಯಕ್ಷರು
ಸಾಮಾನ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.